**ದಿನಾಂಕ: 19-12-2020 ರಂದು ಸಮಯ 10.00 ಗಂಟೆಗೆ ವಾರ್ಡ್ ಸಂಖ್ಯೆ: 156 ಶ್ರೀನಗರಕ್ಕೆ ಸಂಬಂಧಪಟ್ಟಂತೆ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು

1. ಶ್ರೀ. ಸಂದೀಪ ಬಿ.ಸಿ ಸ.ಕಾ.ನಿ.ಅ (ಗಿರಿ), ನೋಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀಮತಿ. ಶಿಲ್ಪಶ್ರೀ. ಬಿ.ಜೆ, ಸಹಾಯಕ ಅಭಿಯಂತರರು – ಸದಸ್ಯ ಕಾರ್ಯದರ್ಶಿ
3. ಶ್ರೀಮತಿ. ಕವಿತಾ (ಪಿ.ಆ.ಪ) – ಸದಸ್ಯರು
4. ಶ್ರೀಮತಿ. ಲಾವಣ್ಯ (ಕಿ.ಆ.ಪ) – ಸದಸ್ಯರು
5. ಶ್ರೀ. ಭರತ್, ಎ.ಸಿ.ಪಿ, ಸಂಚಾರಿ ವಿಭಾಗ
6. ಶ್ರೀ. ವೆಂಕಟೇಶ್, ಠಾಣಾಧಿಕಾರಿಗಳು, ಸಂಚಾರಿ ವಿಭಾಗ
7. ಶ್ರೀ. ರವಿ, ಠಾಣಾಧಿಕಾರಿಗಳು, ಕಾನೂನು ಸುವ್ಯವಸ್ಥೆ, ಹನುಮಂತನಗರ
8. ಶ್ರೀ. ಜಗದೀಶ್ – ಸದಸ್ಯರು
9. ಶ್ರೀ. ಧನಂಜಯ – ಸದಸ್ಯರು
10. ಶ್ರೀ. ವೆಂಕಟೇಶ್ – ಸದಸ್ಯರು
11. ಶ್ರೀಮತಿ. ಜಯಮ್ಮ – ಸದಸ್ಯರು

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ 156ರ ನೊಡಲ್ ಅಧಿಕಾರಿ ಹಾಗೂ ವಾರ್ಡ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನೀಕರಿಗೆ ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

**1) <u>BWSSB ಇಲಾಖೆಗೆ ಸಂಬಂಧಪಟ್ಟ ವಿಷಯಗಳು:</u>**

BWSSB 22 ನೇ ಮುಖ್ಯ ರಸ್ತೆ ಹಾಗೂ ಬೋರೇಗೌಡ ಸ್ಲಂ ಸುತ್ತ ಮುತ್ತಲ ರಸ್ತೆಗಳನ್ನು Restoration ಮಾಡಲು ಉಪಸ್ಥಿತರಿದ್ದ ಸಂಬಂಧಪಟ್ಟ BWSSB ಸಹಾಯಕ ಅಭಿಯಂತರರಿಗೆ ಹಿಂದಿನ ಸಭೆಯಲ್ಲಿ ತಿಳಿಸಲಾಯಿತು.

**2) <u>ಕಾಮಗಾರಿ ಇಲಾಖೆ:</u>**

ಶ್ರೀನಗರ ಬೋರೇಗೌಡ ಸ್ಲಂ ರಸ್ತೆಯಲ್ಲಿ ಚರಂಡಿ ಕಾಮಗಾರಿ ಪ್ರಾರಂಭವಾಗಿದ್ದು ಚರಂಡಿಯ ಹೂಳನ್ನು ಸರಿಯಾಗಿ ತೆಗೆಯಲು ಗುತ್ತಿಗೆದಾರರಿಗೆ ಸೂಚಿಸಲು ಸಭೆಯಲ್ಲಿ ಹಾಜರಿದ್ದ ಶ್ರೀ. ಧನಂಜಯ ಕೋರಿದರು.

ಬೋರೇಗೌಡ ಸ್ಲಂ ರಸ್ತೆಯಲ್ಲಿ ಚರಂಡಿ ಕಾಮಗಾರಿಯ ಸ್ಥಳವನ್ನು ಪರಿಸಿಲಿಸಿ ಕಾಮಗಾರಿಯನ್ನು ವಿಶಿಷ್ಟ ವಿವರಣೆಯಂತೆ ಕಾಮಗಾರಿಯನ್ನು ನಿರ್ವಹಿಸಲು ಗುತ್ತಿಗೆದಾರರಿಗೆ ಸೂಚಿಸಲಾಗುವುದು ಹಾಗೂ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸಹಾಯಕ ಅಭಿಯಂತರವರು ತಿಳಿಸಿದರು.

ಶ್ರೀನಗರ ಉದ್ಯಾನವನದಲ್ಲಿ ಕಸದ ರಾಶಿ ಹಾಗೂ ಸೂಳ್ಳೆಗಳು ತುಂಬ ಇದ್ದು ಸ್ವಚಗೂಳಿಸುವಂತೆ ಸಭೆಯಲ್ಲಿ ಹಾಜರಿದ್ದ ಶ್ರೀ. ವೆಂಕಟೇಶ್ ಕೋರಿದರು.

ಸದರಿ ವಿಷಯದ ಕುರಿತು ತೋಟಗಾರಿಕೆ ಇಲಾಖೆ ರವರಿಗೆ ತಿಳಿಸಲಾಗುವುದು ಎಂದು ಸಹಾಯಕ ಅಭಿಯಂತರರು ಶ್ರೀನಗರ ರವರು ತಿಳಿಸಿದರು.

ಶ್ರೀನಗರ ಕೃಷ್ಣನದಿ ರಸ್ತೆ ಹತ್ತಿರವಿರುವ ಕಲ್ವರ್ಟ ಕಾಮಗಾರಿಯು ಮಂದಗತಿಯಿಂದ ನಡೆಯುತ್ತಿದ್ದು ಇದರಿಂದ ಸಾರ್ವಜನೀಕರಿಗೆ ತುಂಬ ತೊಂದರೆ ಯಾಗುತ್ತಿದ್ದು ಸದರಿ ಕಾಮಗಾರಿಯನ್ನು ಆದಷ್ಟು ಬೇಗ ಮುಗಿಸಿಕೊಡಲು ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ಜಯಮ್ಮರವರು ಕೋರಿದರು.

Scanned with CamScanner

ಸದರಿ ಕಾಮಗಾರಿಯನ್ನು ಬೃಹತ್ ಮಳೆನೀರು ಕಾಲುವೆ ವತಿಯಿಂದ ಕೈಗೊಂಡಿದ್ದು, ಸದರಿ ವಿಷಯದ ಕುರಿತು ಸಂಬಂಧಪಟ್ಟ ಅಭಿಯಂತರರಿಗೆ ತಿಳಿಸಲಾಗುವುದು ಎಂದು ಸಹಾಯಕ ಅಭಿಯಂತರರು ಶ್ರೀನಗರ ರವರು ತಿಳಿಸಿದರು.

**3) COVID-19 ಕಾಯಿಲೆ ಕುರಿತು**

COVID-19 ಕಾಯಿಲೆ ಕುರಿತು ಸಾರ್ವಜನಿಕರ ಹಿತದೃಷ್ಟಿಯಿಂದ ವಾರ್ಡ್‌ನ ನಾಗರೀಕರಿಗೆ ಉಚಿತ **Mobile Team** ರಚಿಸಿದ್ದು ಸದರಿ ಟೀಂಅನ್ನು ವಾರ್ಡನಲ್ಲಿ Camp ಮಾಡಿ ಧ್ವನಿವರ್ಧಕ ಮೂಲಕ ತಪಾಸಣೆ ಮಾಡಿಸಿಕೊಳ್ಳಲು ಅರಿವು ಮೂಡಿಸಲು ಕ್ರಮಕೈಗೊಳ್ಳಲು ಹಾಗೂ ಕಟ್ಟಡ ಕಾಮಗಾರಿ ನಡೆಯುತ್ತಿದ್ದಲ್ಲಿ/ವಾಣಿಜ್ಯ ಸ್ಥಳಗಳಲ್ಲಿ ತಪಾಸಣೆ ಕೈಗೊಳ್ಳಲು ಕ್ರಮವಹಿಸಲು ಸೆಕ್ಟರ್ ಅಧಿಕಾರಿಯವರಿಗೆ ಕ್ರಮಕೈಗೊಳ್ಳಲು ಸೂಚಿಸಲಾಯಿತು.

COVID +Ve Case ಕಂಡು ಬಂದ ಹಿನ್ನಲೆಯಲ್ಲಿ ರೋಗಿಯ ಮನೆಯ ಹತ್ತಿರ ತಕ್ಷಣ ಸಮರ್ಪಕವಾಗಿ, **Sanitization** ಮಾಡಲು ಸಹಾಯಕ ಅಭಿಯಂತರರು ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಲು ಸಭೆಯಲ್ಲಿ ಸೂಚಿಸಲಾಯಿತು.

**4) ಪಾದಚಾರಿ ಮಾರ್ಗ ತೆರವುಗೊಳಿಸುವ ಬಗ್ಗೆ.**

ಶ್ರೀನಗರ ಬಸ್ ನಿಲ್ದಾಣದ ಸುತ್ತಮುತ್ತ ಪಾದಚಾರಿ ಮಾರ್ಗವನ್ನು ತೆರವುಗೊಳಿಸಲು ಸಹಾಯಕ ಅಭಿಯಂತರರು ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತುರ್ತಾಗಿ ಕ್ರಮ ವಹಿಸಲು ತಿಳಿಸಲಾಯಿತು.

**5) ಬೀದಿ ದೀಪ ನಿರ್ವಹಣೆ ಕುರಿತು.**

ಶ್ರೀನಗರದ ಕರಿತಿಮ್ಮನಹಳ್ಳಿ ಉದ್ಯಾನವನದಲ್ಲಿ ಬೀದಿ ದೀಪ ಉರಿಯುತ್ತಿಲ್ಲದಿರುವುದು ಹಾಗೂ ಇದನ್ನು ಸರಿಪಡಿಸಲು ಸಭೆಯಲ್ಲಿ ಹಾಜರಿದ್ದ RWA ರವರು ಕೋರಿದರು.

ಸದರಿ ವಿಷಯದ ಕುರಿತು ಸಂಬಂಧಪಟ್ಟ ವಿದ್ಯುತ್ ವಿಭಾಗದ ಅಭಿಯಂತರರಿಗೆ ತಿಳಿಸಲಾಗುವುದು ಎಂದು ಸಹಾಯಕ ಅಭಿಯಂತರರು ಶ್ರೀನಗರ ರವರು ತಿಳಿಸಿದರು.

19/12

ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ ಸಂಖ್ಯೆ-156 ಶ್ರೀನಗರ

19/12/2020

ಅಧ್ಯಕ್ಷರು ವಾರ್ಡ ಸಮಿತಿ
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ ಸಂಖ್ಯೆ-156 ಶ್ರೀನಗರ

ಪ್ರತಿಯನ್ನು,

1. ಜಂಟಿ ಆಯುಕ್ತರು (ದಕ್ಷಿಣ) ರವರಿಗೆ ಮಾಹಿತಿಗಾಗಿ.
2. ಮುಖ್ಯ ಅಭಿಯಂತರರು(ದ) ರವರಿಗೆ ಮಾಹಿತಿಗಾಗಿ.
3. ಉಪ ಆಯುಕ್ತರು(ದ) ರವರಿಗೆ ಮಾಹಿತಿಗಾಗಿ.
4. ಅಧೀಕ್ಷಕ ಅಭಿಯಂತರರು(ದ) ರವರಿಗೆ ಮಾಹಿತಿಗಾಗಿ.
5. ಕಾರ್ಯಪಾಲಕ ಅಭಿಯಂತರರು ರವರಿಗೆ ಮಾಹಿತಿಗಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ಉಪವಿಭಾಗ, ಬಿ.ಬಿ.ಎಂ.ಪಿ ರವರಿಗೆ ಮಾಹಿತಿಗಾಗಿ.
7. ಕಛೇರಿ ಕಡತಕ್ಕೆ.

Scanned with CamScanner